# 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

## ಎಸ್ ಸಿ /ಎಸ್ ಟಿ ನಂ : 16/2023

ಪ್ರ.ವ.ಬೋ. ದಿನಾಂಕ – 17.07.2025

| | | | |
|---|---|---|---|
| ಸಾಕ್ಷಿದಾರರ ಹೆಸರು | – ಶಿವಕುಮಾರ | ಫ್ರಾಸಾ | 03 |
| ತಂದೆಯ ಹೆಸರು | – ಓಬಳಪ್ಪ | ಚಾಸಾ | 03 |
| ವಯಸ್ಸು | – 40 ವರ್ಷ | | |
| ಉದ್ಯೋಗ | – ನೀರಗಂಟಿ ಕೆಲಸ | | |
| ವಾಸ ಸ್ಥಳ | – ಘಟಪರ್ತಿ | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಖ್ಯ ವಿಚಾರಣೆ – ಸರ್ಕಾರಿ ಅಭಿಯೋಜಕರಿಂದ –**

ಸಾಕ್ಷಿಗೆ ನಿಪಿ:2, 4 ನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ:2(ಸಿ), 4(ಬಿ) ಎಂದು ಗುರುತಿಸಲಾಯಿತು. ದಿ. 29.1–2023 ರಂದು ವಲಸೆ ಗ್ರಾಮದ ಶಂಕರನಾಯ್ಕನ ಮೆಕ್ಕೆ ಜೋಳದ ಜಮೀನಿನಲ್ಲಿ ಮಹಜರಗೆ ನಮ್ಮನ್ನು ಕರೆಯಿಸಿದ್ದರು. ಮಣ್ಣು ಬಿಳಿ ಶರ್ಟನ್ನು ಪ್ಯಾಕ್ ಮಾಡಿ ಪಡೆದಿರುತ್ತಾರೆ. ಸದರಿ ಶರ್ಟು ರಕ್ತಮಯವಾಗಿತ್ತು. ಸದರಿ ಶರ್ಟು ಮತ್ತು ಮಣ್ಣನ್ನು ಪ್ಯಾಕ್ ಮಾಡಿ ತೆಗೆದುಕೊಂಡು ಹೋಗಿರುತ್ತಾರೆ. ಶರ್ಟನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಸಾಕ್ಷಿಯು ಶರ್ಟನ್ನು ಈಗಾಗಲೇ ಎಂಓ:2 ಎಂದು ಗುರುತಿಸಲಾಗಿದೆ. ಮಣ್ಣು ಮತ್ತು ಮಾದರಿ ರಕ್ತದ ಮಣ್ಣನ್ನು ಈಗಾಗಲೇ ಎಂಓ:3, 4 ಎಂದು ಗುರುತಿಸಲಾಗಿದೆ. ಸಾಕ್ಷಿಗೆ ನಿಪಿ:3 ರ ಫೋಟೊವನ್ನು ತೋರಿಸಿದ್ದು, ಅದನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ನನ್ನ ಜೊತೆ ಚಾಸಾ:2 ರವರು ಸಹಿ ಮಾಡಿರುತ್ತಾರೆ.

**(ಪಾಟೀ ಸವಾಲು ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ರೂ 500/– ರ ಖರ್ಚಿನೊಂದಿಗೆ ಮುಂದೂಡಲಾಗಿದೆ. )**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)
ಓದಿ ಹೇಳಿ ಕೇಳಿ ಸರಿ ಇದೆ.

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.

**ಸಾಕ್ಷಿಯನ್ನು ದಿನಾಂಕ : 10.10.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**– ಪಾಟೀ ಸವಾಲು – ಆರೋಪಿಯ ಪರ ಕೆ.ಎನ್.ಎಂ. ವಕೀಲರಿಂದ –**

ನಿಪಿ:2 ರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ. ನಿಪಿ:2 ಯಾವ ದಾಖಲೆ ಎಂದು ನನಗೆ ಗೊತ್ತಿಲ್ಲ. ನಿಪಿ:2 ಕ್ಕೆ ಸಹಿಯನ್ನು ಜಮೀನಿನಲ್ಲಿ ಮಾಡಿದ್ದು, ಸದರಿ ಜಮೀನು ಯಾರದ್ದು ಎಂದು ನನಗೆ ಗೊತ್ತಿಲ್ಲ. ಸಹಿಯನ್ನು ಚಳ್ಳಕೆರೆ ಪೋಲಿಸ್ ಠಾಣೆಯಲ್ಲಿ ಮಾಡಿರುತ್ತೇನೆ ಎಂದರೆ ಸರಿ. ಫೋಟೊದಲ್ಲಿರುವ ಸ್ಥಳದ ಸರ್ವೇ ನಂಬರು ನನಗೆ ಗೊತ್ತಿಲ್ಲ. ಯಾವ ಕಾರಣಕ್ಕೆ ಫೋಟೊ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ:4 ಕಚ್ಚಾ ನಕ್ಷೆಯನ್ನು ಯಾವ ಉದ್ದೇಶಕ್ಕೆ ತೆಗೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಪಿ:4 ಕ್ಕೆ ಸಹಿಯನ್ನು ಚಳ್ಳಕೆರೆ ಪೋಲಿಸ್ ಠಾಣೆಯಲ್ಲಿ ಮಾಡಿರುತ್ತೇನೆ ಎಂದರೆ ಸರಿ. ನಿಪಿ:2 ಕ್ಕೆ ಯಾವ ಸಮಯದಲ್ಲಿ ಸಹಿ ಮಾಡಿದ್ದೇನೆ ಎಂದು ಹೇಳಲು ನನಗೆ ಬರುವುದಿಲ್ಲ.

ದಿ. 29.1–2023 ರಂದು ವಲಸೆ ಗ್ರಾಮದ ಶಂಕರನಾಯ್ಕನ ಮೆಕ್ಕೆ ಜೋಳದ ಜಮೀನಿನಲ್ಲಿ ಮಹಜರಗೆ ಸಹಿ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಣ್ಣು ಬಿಳಿ ಶರ್ಟನ್ನು ನನ್ನ ಸಮಕ್ಷಮ

ಮಹಜರ ಮಾಡಿ ಅಮಾನತು ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಮಣ್ಣನ್ನು ಪಡೆದಿಲ್ಲ ಎಂದರೆ ಸರಿ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ

ನ್ಯಾಯಾಧೀಶರು, ಚಿತ್ರದುರ್ಗ.